E-MAIL jdmysore@gmail.com & jdir_cce_kamy@yahoo.com
Website www.rjdcemys.in
Phone 0821-2426696
Fax 0821-2428696

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಪ್ರಾಕಮ್ಯೆ/ಸಂಯೋಜನೆ/ /2018-19

ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ,
ವಿನೋಬ ರಸ್ತೆ, ಮೈಸೂರು-570 005.
ದಿನಾಂಕ:06-12-2017.

ತುರ್ತು

ಸುತ್ತೋಲೆ

ವಿಷಯ:2018-19ನೇ ಸಾಲಿನ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು ಕಾಲೇಜು ಶಿಕ್ಷಣ ಆಯುಕ್ತರ ಕಚೇರಿ ಸೂಚನೆ ಪ್ರಕಾರ ಹೆಚ್ಚಿಸುವುದಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ ಹೊಸ ಸೆಕ್ಷನ್‌ಗಳಿಗೆ ಸಂಯೋಜನೆ ಪಡೆಯಲು ನಿಗದಿತ ನಮೂನೆಯಲ್ಲಿ ಜಂಟಿನಿರ್ದೇಶಕರ ಕಚೇರಿಗೆ ತುರ್ತಾಗಿ ದಿನಾಂಕ: 08-06-2018ರ ಒಳಗೆ ಅಗತ್ಯ ಮಾಹಿತಿ ಒದಗಿಸುವಂತೆ ಕೋರಿ.

ಉಲ್ಲೇಖ:ದಿನಾಂಕ:05-06-2018ರಂದು ಮೈಸೂರು ಜಿಲ್ಲೆಯ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರು ಜಂಟಿನಿರ್ದೇಶಕರ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರು ಹಾಗೂ ಸಿ.ಡಿ.ಸಿ ಯ ನಿರ್ದೇಶಕರನ್ನು ಬೇಟಿ ಮಾಡಿನಡೆಸಿದ ಚರ್ಚೆ.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಪಟ್ಟಂತೆ 2018-19ನೇ ಸಾಲಿಗೆ ಸಾಕಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗದೇ ಕಾಲೇಜುಗಳು ಸಮಸ್ಯೆಗಳಿಗೆ ಒಳಗಾಗಿದ್ದು ಈ ಸಮಸ್ಯೆ ಪರಿಹಾರಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ ಹೊಸ ಸೆಕ್ಷನ್ ತೆರೆಯಲು ಸಂಯೋಜನೆ ಪಡೆಯಬೇಕಾಗಿದ್ದು ಪ್ರವೇಶಾತಿ ಪಡೆಯಲು ಕಾಲೇಜುಗಳಿಗೆ ಬೇಡಿಕೆ ಸಲ್ಲಿಸಿದ ವಿದ್ಯಾರ್ಥಿಗಳ ಸಂಖ್ಯೆ ಸಹಿತ ನಿಗದಿತ ನಮೂನೆಯಲ್ಲಿ ಜಂಟಿ ನಿರ್ದೇಶಕರ ಕಚೇರಿಗೆ ದಿನಾಂಕ:08-06-2018ರ ಒಳಗೆ ಮಾಹಿತಿ ನೀಡುವಂತೆ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ ವ್ಯಾಪ್ತಿಯ ಎಲ್ಲಾ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

ಪ್ರಾದೇಶಿಕ ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ,
ಮೈಸೂರು - 570 005

ಇವರಿಗೆ,

ಈ ಕಚೇರಿ ವ್ಯಾಪ್ತಿಯ ಎಲ್ಲಾ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿ:

1) ಸನ್ಮಾನ್ಯ ಕಾಲೇಜು ಶಿಕ್ಷಣ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಮಾಹಿತಿಗಾಗಿ,
2) ಕಚೇರಿ ಪ್ರತಿ.

ನಮೂನೆ

(ಬಿಎ/ಬಿಕಾಂ/ಬಿಬಿಎಂ/ಬಿಎಸ್ಸಿ ಕೋರ್ಸುಗಳಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ನಮೂನೆಯಲ್ಲಿ ಮಾಹಿತಿ ತಯಾರಿಸಿ ಸಲ್ಲಿಸುವುದು ಕಡ್ಡಾಯ)

ಕಾಲೇಜಿನ ಹೆಸರು ಮತ್ತು ವಿಳಾಸ:

ದೂರವಾಣಿ ಸಂಖ್ಯೆ:

ಪ್ರಾಂಶುಪಾಲರ ಮೊಬೈಲ್ ಸಂಖ್ಯೆ:

ಈ ಮೇಲ್ ವಿಳಾಸ:

| ಕ್ರ.ಸಂ. | ಕಾಲೇಜಿನ ಹೆಸರು | ಶಾಶ್ವತ ಸಂಯೋಜನೆಗೆ ಒಳಪಟ್ಟಿರುವ | | | | ತಾತ್ಕಾಲಿಕ ಸಂಯೋಜನೆಗೆ ಒಳಪಟ್ಟಿರುವ | | | | ಪ್ರವೇಶಾತಿಗೆ ಕಾದು ಕುಳಿತಿರುವ ವಿದ್ಯಾರ್ಥಿಗಳ ಸಂಖ್ಯೆ | ಮೂಲಭೂತ ಸೌಕರ್ಯಗಳನ್ನು ನೀಡಲು ತೆಗೆದುಕೊಂಡ ಕ್ರಮಗಳು ಉದಾ:ತರಗತಿ ಕೊಠಡಿ, ಶೌಚಾಲಯ, ಗ್ರಂಥಾಲಯ, ಉಪನ್ಯಾಸಕರು ಇತ್ಯಾದಿ |
|---|---|---|---|---|---|---|---|---|---|---|---|
| | | ಕೋರ್ಸುಗಳು ಹಾಗೂ ಕಾಂಬಿನೇಷನ್‌ಗಳು | ಸೆಕ್ಷನ್ ಸಂಖ್ಯೆ | ವಿಶ್ವವಿದ್ಯಾನಿಲಯ ನಿಗದಿಪಡಿಸಿದ ವಿದ್ಯಾರ್ಥಿ ಪರಿಮಿತಿ | ಹೆಚ್ಚಿಸಬೇಕಾದ ವಿದ್ಯಾರ್ಥಿ ಪರಿಮಿತಿ | ಕೋರ್ಸುಗಳು ಹಾಗೂ ಕಾಂಬಿನೇಷನ್ | ಸೆಕ್ಷನ್ ಸಂಖ್ಯೆ | ವಿಶ್ವವಿದ್ಯಾನಿಲಯ ನಿಗದಿಪಡಿಸಿದ ವಿದ್ಯಾರ್ಥಿ ಪರಿಮಿತಿ | ಹೊಸದಾಗಿ ಬೇಕಾಗಿರುವ ಹೆಚ್ಚುವರಿ ಸೆಕ್ಷನ್‌ಗಳು | | |
| 1. | 2. | 3. | 4. | 5. | 6. | 7. | 8. | 9. | 10. | 11. | 12. |
| | | | | | | | | | | | |

ಸೂಚನೆ:

1) ನಮೂನೆಯಲ್ಲಿ ಕೋರಿರುವ ಮಾಹಿತಿ ಜೊತೆಗೆ 2017–18ನೇ ಸಾಲಿನವರೆಗೆ ಶಾಶ್ವತ/ತಾತ್ಕಾಲಿಕ ಸಂಯೋಜನೆಗೆ ಒಳಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಆದೇಶದ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸುವುದು.
2) ಬಿಎ/ಬಿಕಾಂ/ಬಿಬಿಎಂ/ಬಿಎಸ್ಸಿ ಕೋರ್ಸುಗಳಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ನಮೂನೆಯಲ್ಲಿ ಮಾಹಿತಿ ತಯಾರಿಸಿ ಸಲ್ಲಿಸುವುದು. ಉದಾ: ಬಿ.ಎ ಕೋರ್ಸಿನ ಮಾಹಿತಿಯನ್ನು ಒಂದು ನಮೂನೆಯಲ್ಲಿ ಬಿ.ಕಾಂ ಕೋರ್ಸಿನ ಮಾಹಿತಿಯನ್ನು ಇನ್ನೊಂದು ನಮೂನೆಯಲ್ಲಿ.
3) ಬಿ.ಸಿ.ಎ ಹಾಗೂ ಬಿಎಸ್ಸಿ ಕೋರ್ಸುಗಳಿಗೆ ಹೆಚ್ಚುವರಿ ಸೆಕ್ಷನ್‌ಗೆ ಬೇಡಿಕೆ ಸಲ್ಲಿಸುವಾಗ ಪ್ರಯೋಗಾಲಯ ಸೌಕರ್ಯದ ಬಗ್ಗೆ ಸರಿಯಾದ ಮಾಹಿತಿ ನೀಡುವುದು ಕಡ್ಡಾಯ. ಉದಾ: ಪಾಳಿಯಲ್ಲಿ ಪ್ರಯೋಗಾಲಯ ನಡೆಸುವುದು, ಸಾರ್ವಜನಿಕ ರಜಾದಿನ/ವಾರದ ರಜಾ ದಿನಗಳಲ್ಲಿ ಪ್ರಯೋಗಾಲಯ ತರಗತಿ ನಡೆಸುವುದು, ಬೇರೆ ಕಾಲೇಜಿನ ಪ್ರಯೋಗಾಲಯ ಬಳಸಿಕೊಳ್ಳುವುದು ಇತ್ಯಾದಿ. ಇಂತಹ ಸಂದರ್ಭದಲ್ಲಿ ಪ್ರಯೋಗಾಲಯ ಸೌಕರ್ಯ ನೀಡಲು ಮುಂದಾಗುವ ಕಾಲೇಜಿನ ಪ್ರಾಂಶುಪಾಲರ ಒಪ್ಪಿಗೆ ಪತ್ರವನ್ನು ಕಳುಹಿಸಿಕೊಡುವುದು.
4) ಪೂರಕ ಪರೀಕ್ಷೆಗಳಲ್ಲಿ ಪಾಸಾಗಿ ಪ್ರವೇಶ ಪಡೆಯಲು ಬರುವ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಅಗತ್ಯವಿದ್ದರೆ ಹೊಸ ಸೆಕ್ಷನ್ ಬೇಡಿಕೆ ಪತ್ರ ಸಲ್ಲಿಸಲು ಸೂಚಿಸಿದೆ.

ಪ್ರಾದೇಶಿಕ ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ
ಮೈಸೂರು – 570 005